# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾ ಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 211/2024**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 16-07-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ | ಸಂತೋಷ ಲಮಾಣಿ | **ಪ್ರಾ.ಸಾ ಃ 08** |
| **ತಂದೆ ಃ ಗಂಡ ಹೆಸರು** | ಃ | ಚೆನ್ನಪ್ಪ | **ಚಾ.ಸಾ ಃ 05** |
| **ವಯಸ್ಸು** | ಃ | 28 ವರ್ಷ | |
| **ಉದ್ಯೋಗ** | ಃ | ಇಲೆಕ್ಟ್ರಿಷನ್ ಕೆಲಸ | |
| **ವಾಸಸ್ಥಳ** | ಃ | ಜುಂಜನಬೈಲ ತಾಂಡಾ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಚಾಸಾ-1 ಮತ್ತು 4 ರವರ ಪರಿಚಯ ಇದೆ. ನನಗೆ ಆರೋಪಿಯ ಪರಿಚಯವಿಲ್ಲ.

ಸುಮಾರು ಎರಡು ವರ್ಷಗಳ ಹಿಂದೆ ಪಾಸಪೋರ್ಟ ಮಾಡಿಸುವ ಸಲುವಾಗಿ ಪೋಲಿಸ ಠಾಣೆಗೆ ಹೋದಾಗ ನಿಪಿ-2 ಗುನ್ಹೆ ಸ್ಥಳದ ಪಂಚನಾಮೆ ಹಾಗೂ ಹಾತ ನಕಾಶೆಗೆ ಪೋಲೀಸರು ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಿಪಿ-2 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-2(ಸಿ), ನಿಪಿ-3 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ನಿಪಿ-4 ಮತ್ತು 5 ರಂತೆ ಪೋಟೋ ತೆಗೆದಿರುತ್ತಾರೆ. ನಮ್ಮ ಊರಿನ ತುಕಾರಮ ಇವರ ತಂದಗೆ ಅಪಘಾತವಾದ ಬಗ್ಗೆ ಸಹಿ ಪಡೆದುಕೊಂಡಿರುತ್ತಾರೆ. ನನ್ನ ಜೊತೆ ಸಹಿ ಮಾಡುವಾಗ ಚಾಸಾ-4 ರವರು ಇದ್ದರು. ಪೋಲೀಸ ಠಾಣೆಗೆ ಹೋಗಿದ್ದಾಗ ನಿಪಿ-6 ರಂತೆ ಪಂಚನಾಮೆಗೆ ಸಹಿ ಪಡೆದಿರುತ್ತಾರೆ. ನಿಪಿ-6 ರಲ್ಲಿರುವ ತನ್ನ ಸಹಿ ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-6(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ-7 ಮತ್ತು 8 ರಂತೆ ಪೋಟೊ ತೆಗೆದಿರುತ್ತಾರೆ. ಪಂಚನಾಮೆಗಳಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಅವುಗಳನ್ನು ನನಗೆ ಓದಿ ಹೇಳಿಲ್ಲ.

***(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು*** ಭಾಗಶಃ ***ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,*** *ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 07.10.2022 ರಂದು ಹುಬ್ಬಳ್ಳಿ-ಕಾರವಾರ ಹೆದ್ದಾರಿ ಮೇಲೆ ಜೈಹಿಂದ ದಾಬಾ ಹತ್ತಿರ ಅಪಘಾತವಾದ ಸ್ಥಳದಲ್ಲಿ ಚಾಸಾ-18 ರವರು ನನ್ನ ಹಾಗೂ ಚಾಸಾ-4 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಿಪಿ-2 ರಂತೆ ಅಪಘಾತವಾದ ಸ್ಥಳದಲ್ಲಿ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-3 ರಂತೆ ಗುನ್ಹೆ ಸ್ಥಳದ ನಕಾಶೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಮಧ್ಯಾಹ್ನ 12-30 ರಿಂದ 2-00 ಗಂಟೆಯವರೆಗೆ ಪಂಚನಾಮೆ ಜರುಗಿಸಿ ಅದನ್ನು ಓದಿ ಹೇಳಿದ ನಂತರ ಸ್ಥಳದಲ್ಲಿ ಅವುಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-4 ಮತ್ತು 5 ರಂತೆ ಪೋಟೊ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಮಧ್ಯಾಹ್ನ 3-30 ರಿಂದ 4-30 ರ ವೆರೆಗೆ ಕಲಘಟಗಿ ಪೋಲಿಸ ಠಾಣೆ ಆವರಣದಲ್ಲಿ ಅಪಘಾತದಲ್ಲಿ ಭಾಗಿಯಾದ ಕಾರ ನಂ ಕೆಎ-42-

ಎ-5975 ಮತ್ತು ಮೋಟಾರ ಸೈಕಲ್ ನಂ ಕೆಎ-25-ಇವಾಯ್-7616 ನೇದ್ದವುಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-6 ನ್ನು ಓದಿ ಹೇಳಿದ ನಂತರ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-7 ಮತ್ತು 8 ರಂತೆ ಫೋಟೊ ತೆಗೆದಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ನನಗೆ ಪರಿಚಯಸ್ಥ ಆದ್ದರಿಂದ ಅವನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ ಆರ್ ಜಿ ವಕೀಲರಿಂದಃ**

ಏನು ಎಲ್ಲ

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**